# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 952 |
| ಸದಸ್ಯರ ಹೆಸರು | : ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : 20.08.2025 |
| ಉತ್ತರಿಸುವ ಸಚಿವರು | : ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂ ಪರಿವರ್ತನೆ ಮಾಡುವಾಗ ಸರ್ಕಾರಿ ರಸ್ತೆ ಸಂಪರ್ಕ ಇಲ್ಲದಿದ್ದ ಪಕ್ಷದಲ್ಲಿ ಜಮೀನು ಭೂ ಪರಿವರ್ತನೆ ಮಾಡಬಾರದು ಮತ್ತು ಭೂ ಪರಿವರ್ತನೆಗೊಳಿಸುವ ಅಲಿನೇಷನ್ ಪೂರ್ವ ನಕ್ಷೆಯಲ್ಲಿ ಸರ್ಕಾರಿ ಸಂಪರ್ಕ ರಸ್ತೆಯನ್ನು ತೋರಿಸಬೇಕು ಮತ್ತು ಯಾವುದೇ ಖಾಸಗಿ ಸಂಪರ್ಕದ ಬಗ್ಗೆ ತೋರಿಸಬಾರದು ಎಂಬ ಆದೇಶದಿಂದಾಗಿ ಸಾಕಷ್ಟು ಅರ್ಜಿದಾರರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, | ಬಂದಿದೆ. |
| (ಆ) | ಬಂದಿದ್ದಲ್ಲಿ, ಜಮೀನಿನ ಒಂದು ಭಾಗದಲ್ಲಿ ಭೂ ಪರಿವರ್ತನೆಗೊಳಿಸುವ ಸಂದರ್ಭದಲ್ಲಿ ಸರ್ಕಾರಿ ರಸ್ತೆಯ ವ್ಯವಸ್ಥೆ ಇಲ್ಲದ ಜಮೀನಾಗಿದ್ದಲ್ಲಿ, ಅರ್ಜಿದಾರರಿಗೆ ಅವರ ಜಮೀನು ಪರಿವರ್ತಿಸುವ ಅವಕಾಶ ಇಲ್ಲದಂತಾಗುತ್ತದೆ ಜಮೀನಿಗೆ ಸಂಪರ್ಕ ರಸ್ತೆ ಕಾಣಿಸದ. ಪಕ್ಷದಲ್ಲಿ ಅವರು ಭೂ ಪರಿವರ್ತನೆಯಿಂದ ವಂಚಿತರಾಗುತ್ತಾರೆ. ಈ ಸಮಸ್ಯೆ ಅಧಿಕವಾಗಿರುವುದರಿಂದ ಇದನ್ನು ಪರಿಹರಿಸಲು ಸರ್ಕಾರ ಏನು ಕ್ರಮವಹಿಸಿದೆ; | ಭೂ ಪರಿವರ್ತನೆಗೆ ಅರ್ಜಿ ಸಲ್ಲಿಸುವಾಗ ಸಂಪರ್ಕ ರಸ್ತೆ ಇರುವ ಬಗ್ಗೆ ಅರ್ಜಿದಾರರು ಅಫಿಡವಿಟ್‌ನಲ್ಲಿ ಮಾಹಿತಿ ಸಲ್ಲಿಸಬೇಕಾಗುತ್ತದೆ. ಅರ್ಜಿದಾರರ ಜಾಗಕ್ಕೆ ರಸ್ತೆ ಸಂಪರ್ಕ ಇಲ್ಲದಿದ್ದಲ್ಲಿ ಅವರಿಗೆ ಸ್ಥಳೀಯ ಯೋಜನಾ ಪ್ರಾಧಿಕಾರದಿಂದ ಅನುಮತಿ ಸಿಗುವುದಿಲ್ಲ. ಅಲ್ಲದೆ, ರಸ್ತೆ ಇಲ್ಲದ ಜಾಗವನ್ನು ಮತ್ತೊಬ್ಬರು ಖರೀದಿಸಿದರೆ ಅವರಿಗೆ ರಸ್ತೆ ಉಪಯೋಗದಲ್ಲಿ ಸಮಸ್ಯೆಯಾಗುತ್ತದೆ.<br><br>ಕೆಲವು ಸಮಯದಲ್ಲಿ ರಸ್ತೆಯನ್ನು ಖಾಸಗಿ ಜಮೀನಿನಲ್ಲಿ ತೋರಿಸಿ ಉಪಯೋಗಿಸುತ್ತಿರುತ್ತಾರೆ. ಇಂತಹ ಸನ್ನಿವೇಶದಲ್ಲಿ ರಸ್ತೆ ಹಾದು ಹೋಗುವ ಖಾಸಗಿ ಜಮೀನಿನ ಮಾಲೀಕರು ಭೂ ಪರಿವರ್ತನೆಗೆ ತಕರಾರು ಅರ್ಜಿಯನ್ನು ಸಲ್ಲಿಸುತ್ತಾರೆ. ನಂತರ ಖಾಸಗಿ ಜಮೀನಿನವರು ಅವರ ಜಮೀನನ್ನು ನಿಯಮಾನುಸಾರ ಬೇರೆ ಉದ್ದೇಶಕ್ಕೆ ಉಪಯೋಗಿಸಿಕೊಳ್ಳಲು ಬಯಸಿದಾಗ, ಈ ರಸ್ತೆಯ - ಪ್ರವೇಶಕ್ಕೆ ಅಡೆತಡೆಯಾಗುತ್ತದೆ. ಇಂತಹ ಸನ್ನಿವೇಶಗಳಲ್ಲಿ - ಜನರಿಂದ, ರಸ್ತೆಯನ್ನು ಬಿಡಿಸಿಕೊಡಲು/ಹೊಸದಾಗಿ ಈ ರಸ್ತೆಯನ್ನು ನಿರ್ಮಿಸಿಕೊಡಲು ಜಿಲ್ಲಾಡಳಿತಕ್ಕೆ ಅರ್ಜಿಗಳು ಸ್ವೀಕೃತವಾಗುತ್ತದೆ. |

| | | |
|---|---|---|
| | | ಇವೆಲ್ಲವುಗಳನ್ನು ಗಮನದಲ್ಲಿರಿಸಿ ಸರ್ಕಾರದ ನಿಯಮಗಳ ಅನುಸಾರ ರಸ್ತೆಯ ವ್ಯವಸ್ಥೆ ಇಲ್ಲದ ಜಾಗಗಳಿಗೆ ಭೂಪರಿವರ್ತನೆ ಮಾಡುವುದು ಸೂಕ್ತವಾಗಿರುವುದಿಲ್ಲ.<br><br>ಮುಂದುವರೆದು, ಭೂಪರಿವರ್ತಿಸಲಾದ ಜಮೀನಿಗೆ ಸಂಬಂಧಿಸಿದಂತೆ ರಸ್ತೆ ವಿಷಯವಾಗಿ ಯಾವುದೇ ರೀತಿ ವಿವಾದಗಳು ಉದ್ಭವಿಸಿದಲ್ಲಿ ಅದಕ್ಕೆ ಅರ್ಜಿದಾರರೇ ಪರಿಹಾರ ಕಂಡುಕೊಳ್ಳತಕ್ಕದ್ದು ಎಂದು ಹೆಚ್ಚುವರಿ ಷರತ್ತು ವಿಧಿಸುವ ಮೂಲಕ ನಿಯಮಾನುಸಾರ ಭೂಪರಿವರ್ತನಾ ಆದೇಶ ನೀಡಲಾಗುತ್ತಿದೆ. |
| (ಇ) | ದಕ್ಷಿಣ ಕನ್ನಡ ಜಿಲ್ಲೆಯ ಭೌಗೋಳಿಕ ಅಧ್ಯಯನ ಮತ್ತು ಜನಜೀವನ ವ್ಯವಸ್ಥೆಯನ್ನು ಪರಿಗಣಿಸಿ ಭೂ ಪರಿವರ್ತನೆ ಮಾಡುವಾಗ ಸರಕಾರಿ ರಸ್ತೆ ಸಂಪರ್ಕ ಇಲ್ಲದಿದ್ದ ಪಕ್ಷದಲ್ಲಿ ಜಮೀನು ಭೂ ಪರಿವರ್ತನೆ ಮಾಡಬಾರದು ಮತ್ತು ಭೂ ಪರಿವರ್ತನೆಗೊಳಿಸುವ ಅಲಿನೇಷನ್ ಪೂರ್ವ ನಕ್ಷೆಯಲ್ಲಿ ಸರಕಾರಿ ಸಂಪರ್ಕ ರಸ್ತೆಯನ್ನು ತೋರಿಸಬೇಕು ಮತ್ತು ಯಾವುದೇ ಖಾಸಗಿ ಸಂಪರ್ಕ ರಸ್ತೆಯ ಬಗ್ಗೆ ತೋರಿಸಬಾರದು ಎಂಬ ಆದೇಶವನ್ನು ಮರು ಪರಿಶೀಲಿಸಲು ಸರ್ಕಾರ ಈ ಕೂಡಲೇ ಕ್ರಮವಹಿಸುವುದೇ? | ಅಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |

(ಕಡತ ಸಂಖ್ಯೆ: ಆರ್‌ಡಿ 85 ಎಲ್‌ಜಿಎ 2025)

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು